## ಇಂದಿನ ಪೀಳಿಗೆಗೆ ಅಗತ್ಯ

ನಟರಾಜ್ ಹುಳಿಯಾರ್ ಅವರ ‘ಡಾಕ್ಟರ್ ಸಾಹೇಬ್’ ಧಾರಾವಾಹಿಯನ್ನು ತುಂಬಾ ಆಸಕ್ತಿಯಿಂದ ಓದುತ್ತಿರುವೆ. ಹಲವು ಚಾರಿತ್ರಿಕ ವಿದ್ಯಮಾನಗಳನ್ನು ಅರಿಯಲು ಇಂದಿನ ಪೀಳಿಗೆಗೆ ಇದು ತುಂಬ ಅಗತ್ಯವಾಗಿತ್ತು. ಜೂನ್ 6ರ ಸಂಚಿಕೆಯಲ್ಲಿ ಮಹಾತ್ಮ ಗಾಂಧಿಯವರ ಸ್ವಾತಂತ್ರ್ಯ ಹೋರಾಟದ ಕುರಿತು ಬರೆಯುತ್ತಾ ‘ಮೊದಲ ಬಾರಿಗೆ ಪ್ರೀತಿಯನ್ನು ಪ್ರೇರಕ ಶಕ್ತಿಯನ್ನಾಗಿ...’ ಎಂದು ಲೋಹಿಯಾ ವ್ಯಾಖ್ಯಾನಿಸಿರುವುದು ಇಡೀ ಜಗತ್ತಿಗೇ ಒಂದು ಪಾಠವಾಗಿದೆ.

—ಹುರುಕಡ್ಲಿ ಶಿವಕುಮಾರ
ಬಾಚಿಗೊಂಡನಹಳ್ಳಿ



## ಲಿಂಗಸಮಾನತೆಯ ಚಿತ್ರಣ

‘ಪಥ್ಯದಲ್ಲಿ ಪುರುಷ ಅಡುಗೆ ಮಾಡುವ ಕಥನ; ಲಿಂಗಸಮಾನತೆಯತ್ತ ವಿವೇಚನೆಯ ನಡೆ’ (ಜೂ. 20, ಎನ್. ಉದಯಕುಮಾರ್) ‘ನಿಮ್ಮೊಡನೆ’ ಬರಹ ಆಸಕ್ತಿದಾಯಕವಾಗಿದೆ. ಅವರು ಬರೆದಿರುವಂತೆ, ಕೇರಳ ಸರ್ಕಾರದ ಹಾಗೆ, ವಾಷಿಂಗ್ ಪೌಡರ್, ಅಡುಗೆ ಎಣ್ಣೆ, ಇತರೆ ಕಂಪನಿಗಳು ಕೂಡ ತಮ್ಮ ವಿಜ್ಞಾಪನೆಗಳಲ್ಲಿ ಗಂಡಸರು ಮನೆಗೆಲಸಗಳಲ್ಲಿ ತೊಡಗಿರುವ ದೃಶ್ಯಗಳನ್ನು ತೋರಿದರೆ, ಲಿಂಗಸಮಾನತೆಯ ಮನೋಭಾವ ಚಿಕ್ಕವರಿಂದ ದೊಡ್ಡವರಲ್ಲಿ ಬೇರೂರಲು ಸಹಕಾರಿಯಾದೀತು.

—ಗುರುರಾಜ ಜೋಶಿ, ಬೆಂಗಳೂರು

## ಮರೆಯದ ಗುಬ್ಬಚ್ಚಿಗಳ ಸಾಂಗತ್ಯ

‘ಕೆಳಗಿನ ತೋಟದಲ್ಲಿ ಗುಬ್ಬಚ್ಚಿಧಾಮಗಳು’ (ಜೂ. 20, ಡಿ.ಎಂ. ಕುರ್ಕೆ ಪ್ರಶಾಂತ) ಲೇಖನ ನನ್ನನ್ನು ಅರವತ್ತು ವರ್ಷಗಳ ಹಿಂದಕ್ಕೆ ಕರೆದುಕೊಂಡು ಹೋಯಿತು. ನಮ್ಮ ಮನೆಯಲ್ಲಿ ಇದೇ ರೀತಿ ಗುಬ್ಬಚ್ಚಿಗಳ ಸಾಂಗತ್ಯ ನಮಗೆ ಇದ್ದಿದ್ದು ನೆನಪಾಯಿತು. ಆಗ ಅವರೆಕಾಯಿ ಬಿಡಿಸಲು ಕುಳಿತರೆ ಅದರಲ್ಲಿ ಇರುವ ಹುಳುಗಳನ್ನು ತಿನ್ನಲು ಗುಬ್ಬಚ್ಚಿಗಳು ಹಾರಿ ಬಂದು ಕಾಯುತ್ತಿದ್ದ ಚಿತ್ರ ಕಣ್ಮುಂದೆ ಬಂದಿತು. ಅವುಗಳ ಚಿವ್‌ಚಿವ್ ಧ್ವನಿ ನಮಗೆ ಸುಪ್ರಭಾತವಾಗಿತ್ತು. ಚಿಕ್ಕ, ಸೂಕ್ಷ್ಮ ಲೇಖನ ಅನೇಕ ನೆನಪುಗಳನ್ನು ಜೀವಂತಗೊಳಿಸಿತು.

—ಎಸ್. ವಿಜಯಲಕ್ಷ್ಮೀ,
ಬೆಂಗಳೂರು



## ಕನ್ನಡ ಸಿನಿರಂಗದ ಪ್ರತಿಬಿಂಬ




‘ಅಭಿಮಾನಿ ದೇವರುಗಳು ಅಂತರ್ಧಾನ; ಕನ್ನಡ ಸಿನಿಮಾಕ್ಕೆ ಎಲ್ಲಿದೆ ಸಮಾಧಾನ?’ ಹಾಗೂ ‘ಕಳೆದುಹೋಯಿತೇ ವಿಶ್ವಾಸ’ (ಜೂ. 20, ವಿಶಾಖ ಎನ್., ರಘುನಾಥ ಚ.ಹ.) ಮುಖಪುಟ ಲೇಖನಗಳು ಪ್ರಸ್ತುತ ಕನ್ನಡ ಚಿತ್ರರಂಗದ ಸ್ಥಿತಿಗೆ ಕನ್ನಡಿ ಹಿಡಿದಂತಿವೆ.

ಚಿತ್ರರಂಗದ ಆಗಿನ ದಿನಗಳು ಹಾಗೂ ಈಗಿನ ದಿನಗಳ ಹೋಲಿಕೆ, ವಿಮರ್ಶೆ ವಾಸ್ತವಿಕವಾಗಿದೆ. ತಂತ್ರಜ್ಞಾನದ ಅಲಭ್ಯತೆಯಲ್ಲಿಯೂ ಕಥೆಗಳಿಂದ, ನಟನೆಯಿಂದ ಗೆದ್ದ ಎಷ್ಟೋ ಸಿನಿಮಾಗಳ ಉದಾಹರಣೆ ನೀಡಬಹುದು. ಒಂದೇ ಧಾಟಿಯ, ಜೊಳ್ಳು ಸಿನಿಮಾಗಳಿಂದ ಕಾಲಾಂತರದಲ್ಲಿ ಕನ್ನಡ ಚಿತ್ರರಂಗ ಅಭಿಮಾನಿಗಳನ್ನು ಕಳೆದುಕೊಂಡಿರುವುದಂತೂ ಸತ್ಯ.

ಡಾ. ರಾಜ್‌ಕುಮಾರ್ ಅವರ ನಂತರ ಕನ್ನಡ ಚಿತ್ರೋದ್ಯಮಕ್ಕೆ ಅನಾಥ ಭಾವ ಆವರಿಸಿರುವುದು ಕೂಡ ಸುಳ್ಳಲ್ಲ. ಇದರೊಂದಿಗೆ, ಆಶಾಭಾವನೆಯಂತೆ ಈಗೀಗ ಕನ್ನಡ ಚಿತ್ರರಂಗದಲ್ಲಿಯೂ ಹೊಸ ಪ್ರಯತ್ನಗಳು ಸಾಗುತ್ತಿವೆ. ಹೊಸಬರು ‘ಹೊಸತನ’ದ ಸೂತ್ರದೊಂದಿಗೆ ಉತ್ತಮ ಕಥೆಗಳನ್ನು ನೀಡುತ್ತಿದ್ದಾರೆ. ಅವು ಯಶಸ್ಸು ಕಾಣುತ್ತಿವೆ ಕೂಡ. ಆದರೆ ಪ್ರೇಕ್ಷಕನನ್ನು ಸಿನಿಮಾ ಮಂದಿರದೆಡೆಗೆ ಸೆಳೆಯುವ ಮತ್ತಷ್ಟು ಸಮರ್ಥ ಪ್ರಯತ್ನಗಳು ನಡೆಯಬೇಕಿವೆ.

—ರಾಮಾನುಜ ಎಂ., ಬೆಂಗಳೂರು



## ಕುತೂಹಲದ ಕಥೆ

‘ಮತ್ಸ್ಯಗಂಧಿ ನಂಟಿನ ಹೇಲ್ತಾರೆ’ (ಜೂ. 20, ವಿನು ಗಂಗೆ) ‘ಮರಗಳ ಕಥೆ’ಯಲ್ಲಿ ಪೌರಾಣಿಕ ಪಾತ್ರಕ್ಕೆ ಹೋಲಿಸಿ, ಬೆರಗಿನ ಪ್ರಕೃತಿಯನ್ನು ಪರಿಚಯಿಸಿರುವ ಪರಿ ಅತ್ಯಾಕರ್ಷಕ ಎನಿಸಿತು. ಅಚ್ಚರಿ ಮೂಡಿಸುವ ಅಪರೂಪದ ಮತ್ಸ್ಯಗಂಧಿ ಮರದ ಬಗ್ಗೆ ತಿಳಿಸಿದ್ದಕ್ಕೆ ಧನ್ಯವಾದಗಳು. ಕಾಡು, ಉದ್ಯಾನ, ಕುಂಡಗಳಲ್ಲಿ ಬೀಜಗಳನ್ನು ನೆಟ್ಟು ಸಂಭ್ರಮಿಸುವ ಲೇಖಕಿ, ಓದುಗರ ಮನಗಳಲ್ಲೂ ಕುತೂಹಲದ ಬೀಜಗಳನ್ನು ಬಿತ್ತಿ, ‘ಮರಗಳ ಕಥೆ’ಗಳ ಸರಣಿಯನ್ನು ಕಾದು ನೋಡುವಂತೆ ಮಾಡಿದ್ದಾರೆ.

—ಎಚ್.ಎಂ. ಸುಭಾಷಿಣಿ, ಬೆಂಗಳೂರು

## ಸುಲಲಿತ ಬರಹ

‘ಐನೂರು ರೂಪಾಯಿ ನೋಟು’ (ಜೂ. 13, ವಸುಮತಿ ಉಡುಪ) ಕಥೆ ಬಹಳ ಸರಳ, ಸುಲಲಿತವಾಗಿದೆ. ಹಳತು ಮತ್ತು ಹೊಸದರ ತಾಕಲಾಟ, ಘರ್ಷಣೆಯಿದ್ದರೂ ಅದನ್ನು ಬಾಯಿ ಬಿಟ್ಟು ಹೇಳದೆ ಒಬ್ಬರಿಗೊಬ್ಬರು, ಅಮ್ಮ ಮಗಳು ನಡೆದುಕೊಳ್ಳುವ ರೀತಿ ಅತ್ಯಂತ ಸಹಜವಾಗಿದೆ. ಐನೂರು ರೂಪಾಯಿ ನೋಟು ಹಾಸಿಗೆ ಕೆಳಗೆ ಇಟ್ಟು ಅಮ್ಮನ ಕಿರಿಕಿರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರೂ ಅಮ್ಮನಿಗೆ ಅದು ಗೊತ್ತಿಲ್ಲದೆ, ಆಮೇಲೆ ಅದು ಗೊತ್ತಾದರೂ, ಅದನ್ನು ಮಗಳಿಗೆ ಹೇಳುವ ರೀತಿ ಸಂತೋಷವಾಗುವಂತಿದೆ.

—ಉಷಾ ರಾಜಾರಾವ್



## ಹೊಸ ಪದಗಳ ಪರಿಚಯ

‘ಪಿಚ್ಚರ್ ಬಿಡ್ತು’ (ಜೂ. 13, ಸಮತಾ ಆರ್.) ‘ಮಂದಹಾಸ’ ಬರಹ ಚೆನ್ನಾಗಿತ್ತು. ಅದರಲ್ಲಿ ಕೆಲವು ಪದಗಳ ಪರಿಚಯ ಇದೆ. ಹಾಗಂತ ಯಾವ ಸಂದರ್ಭದಲ್ಲೂ ಬಳಸುವುದಿಲ್ಲ. ಕೆಲವು ಹೊಸದಾಗಿ ಪರಿಚಯ ಆದವು. ಸರಾಗವಾಗಿ ಓದಿಸಿಕೊಂಡು ಹೋಯಿತು.

—ಅರುಣ್ ಕೆ.ಎನ್., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in